ಈ ಕಡೆ ಮನೆಯಲ್ಲಿ ದೊಡ್ಡ ಗಲಾಟೆ, "ಹುಡುಗಿ ಎಲ್ಲಿ ಹೋದಳು?" ಮನೆಯವರು ಅಲ್ಲಿ ಇಲ್ಲಿ ವಿಚಾರಿಸುತ್ತ ಮಹಾಮಾಯಾಳ ಮನೆಗೆ ಹೋದರು. ಅವರು ಎಲ್ಲವನ್ನೂ ಹೇಳಿಬಿಟ್ಟರು. ನಾನು ಬಹುವಾಗಿ ಬೇಡಿಕೊಂಡಿದ್ದೆ, "ಮನೆಯವರು ಹುಡುಕಿಕೊಂಡು ಬಂದರೆ ಏನೂ ಹೇಳಬೇಡಿ" ಎಂದು. ನನ್ನನ್ನು ಒತ್ತಾಯ ಮಾಡಿ ಮನೆಗೆ ಕರೆದುಕೊಂಡು ಹೋದರು. ಹೆಚ್ಚೇನೂ ಬೈಯಲಿಲ್ಲ. ಇದಾಗಿ ೪-೫ ತಿಂಗಳ ನಂತರದ ಘಟನೆ. ಸುಧೀರಾ ಅಕ್ಕ ಆಗ ಶಾಲೆಯಲ್ಲಿಯೇ ಇದ್ದರು. ೧೯೧೧ನೇ ಇಸವಿಯ ಸರಸ್ವತಿ ಪೂಜೆಯ ವಿಸರ್ಜನೆಯ ದಿನವದು. ಸುಧೀರಾ ಅಕ್ಕನ ಜೊತೆ ಆಲೋಚನೆ ಮಾಡಿ ಸಿದ್ಧಳಾಗಿದ್ದೆ. ಅವರು ಶಾಲೆಯಲ್ಲಿ ನನಗಾಗಿ ಕಾಯುತ್ತಿದ್ದರು. ಈ ಕಡೆ ಮನೆಮಂದಿಯಲ್ಲಾ ಮಲಗುವುದನ್ನೇ ನಾನು ಕಾಯುತ್ತಿದ್ದೆ. ರಾತ್ರಿ ಹನ್ನೆರಡು ಗಂಟೆಗೆ ಎಲ್ಲರೂ ಮಲಗಿದ ಮೇಲೆ, ನಾನು ನಿಧಾನವಾಗಿ ಮನೆಯಿಂದ ಹೊರಬಿದ್ದೆ. ನನ್ನ ಚಿಕ್ಕಮ್ಮನಿಗೆ ಎಲ್ಲಾ ಗೊತ್ತಿತ್ತು. ಆ ದಿನವೂ ಅವರಿಗೆ ಹೇಳಿಯೇ ಹೊರಟಿದ್ದೆ.

ಸುಧೀರಾ ಅಕ್ಕ ನನಗಾಗಿ ಕಾದು, ಕಾದು, ಶಾಲೆಯಲ್ಲಿ ಮಕ್ಕಳು ಕೂರುವ ಮಣೆಗಳನ್ನು ಸಾಲಾಗಿಟ್ಟು ಅವುಗಳ ಮೇಲೆ ಮಲಗಿಬಿಟ್ಟಿದ್ದರು. ಸಿಸ್ಟರ್ ನಿವೇದಿತಾರಿಗೆ ಸುಧೀರಾ ಅಕ್ಕ ನನ್ನ ವಿಚಾರ ಹೇಳಿದ್ದರು. ಆದರೆ ಅವರು ಈ ವಿಚಾರವಾಗಿ ಹೆಚ್ಚು ಪ್ರೋತ್ಸಾಹ ಕೊಡದೆ, "ಸೀತಾ, ಸಾವಿತ್ರಿಯರ ದೇಶದಲ್ಲಿ ಇದು ಒಳ್ಳೆಯ ಆದರ್ಶವೆ?" ಮುಂತಾಗಿ ಹೇಳಿದ್ದರು. ಸಿಸ್ಟರ್ ಕ್ರಿಸ್ಟೀನ್ ಕೂಡ ಇದಕ್ಕೆ ಒಪ್ಪಿಗೆ ಕೊಟ್ಟಿರಲಿಲ್ಲ. ಏನೇ ಇರಲಿ, ನಾನು ಶಾಲೆಯನ್ನು ತಲುಪಿದ ಕೂಡಲೇ ಸುಧೀರಾ ಅಕ್ಕ ನನ್ನನ್ನು ಕರೆದುಕೊಂಡು, ಆ ರಾತ್ರಿ ಅಲ್ಲಿಂದ ಹೊರಟರು. ರಾತ್ರಿಯಾದರೆ ಜೊತೆಗೆ ಇರಲಿ ಎಂದು ಗಣೇನ್ ಮಹಾರಾಜರಿಗೂ ಮೊದಲೇ ಹೇಳಿದ್ದರು. ಅವರೂ ಸಿದ್ಧರಾಗಿದ್ದರು.

ನನಗೆ ಆಗ ೧೭ ವರ್ಷ ವಯಸ್ಸು. ಆ ರಾತ್ರಿ ಹನ್ನೆರಡು ಗಂಟೆಗೆ ನಾನು, ಸುಧೀರಾ ಅಕ್ಕ ಹಾಗೂ ಗಣೇನ್ ಮಹಾರಾಜ್ ಕತ್ತಲಲ್ಲಿ ನಡೆಯುತ್ತ ಹೊರಟೆವು. ಅಯ್ಯೋ, ಆ ರಸ್ತೆ ಮುಗಿಯುವುದೇ ಇಲ್ಲ ಎನ್ನಿಸಿತ್ತು! ಹಾತಿ ಬಾಗಾನ್ ಎಂಬ ಜಾಗದಲ್ಲಿ, ರಾಜಾ ರಾಜಕೃಷ್ಣ ಲೇನ್‌ನಲ್ಲಿರುವ ಸುಧೀರಾ ಅಕ್ಕನ ಸೋದರತ್ತೆಯ ಮಗಳ ಮನೆಗೆ ನನ್ನನ್ನು ಕರೆದುಕೊಂಡು ಹೋದರು. ನನ್ನ ಹೆಸರು 'ಪಾರುಲ್' ಎಂದಿತ್ತು. ಸುಧೀರಾ ಅಕ್ಕ ಹೆಸರನ್ನು ಬದಲಿಸಿ 'ಸರಳಾ' ಎಂದಿಟ್ಟರು. ಆ ಮನೆಯಲ್ಲಿ ಸುಮಾರು ಎರಡು ತಿಂಗಳಿದ್ದೆ. ಒಂದೇ ಜಾಗದಲ್ಲಿ ಹೆಚ್ಚು ದಿನವಿದ್ದರೆ, ಎಲ್ಲರಿಗೂ ಗೊತ್ತಾಗಿ ಬಿಡಬಹುದೆಂದು, ಸುಧೀರಾ ಅಕ್ಕ ತಮ್ಮ ಸಹೋದರಿಯ ಜೊತೆಗೆ, ನನ್ನನ್ನು ತಾರಕೇಶ್ವರದ ಬಳಿ ಇರುವ ಹರಿಪಾಲ್ ಎಂಬ ಹಳ್ಳಿಗೆ ಕಳಿಸಿದರು. ಇಲ್ಲಿ ಮೂರು ತಿಂಗಳು ಕಳೆದ ಮೇಲೆ ಬೇಸಿಗೆ ರಜದಲ್ಲಿ ಸುಧೀರಾ ಅಕ್ಕ ನನ್ನನ್ನು ಕೊಲ್ಕತಾದ ಹಾತಿ ಬಾಗಾನಿನಲ್ಲಿರುವ ತಮ್ಮ ಮನೆಗೆ ಕರೆತಂದರು. ಅನಾರೋಗ್ಯದ ನಿಮಿತ್ತ ಸುಧೀರಾ ಅವರ ಅಣ್ಣನಾದ ಸ್ವಾಮಿ ಪ್ರಜ್ಞಾನಂದರು ಆಗ ಆ ಮನೆಯಲ್ಲಿದ್ದರು. ಅವರು ರಾಮಕೃಷ್ಣ ಮಠಕ್ಕೆ ಸೇರಿದ ಸಂನ್ಯಾಸಿಗಳು. ಹಾಗೆಯೇ ಸುಧೀರಾ ಅಕ್ಕನ ಸಹೋದರಿ ಹಾಗೂ ಅವರ ದೊಡ್ಡ ಅಣ್ಣನೂ ಇದ್ದರು. ಸಿಸ್ಟರ್ ಕ್ರಿಸ್ಟೀನರ ಜೊತೆ ತೆಗೆದ ನಮ್ಮ ಶಾಲೆಯ ಗ್ರೂಪ್ ಫೋಟೋದಲ್ಲಿ ನನ್ನನ್ನು ನೋಡಿ ಸ್ವಾಮಿ ಪ್ರಜ್ಞಾನಂದರು ಹೇಳಿದ್ದರಂತೆ, "ಈ ಹುಡುಗಿ ಇತರರಿಗಿಂತ ಬೇರೆಯಾಗಿ ಕಾಣುತ್ತಾಳೆ. ಇವಳಿಂದ ಮುಂದೆ ತುಂಬಾ ದೊಡ್ಡ ಕೆಲಸ ನಡೆಯುತ್ತದೆ" ಎಂದು. ಇದನ್ನು ಸುಧೀರಾ ಅಕ್ಕ ಒಮ್ಮೆ ನನಗೆ ಹೇಳಿದ್ದರು,. ಅವರು ಹೇಳುತ್ತಿದ್ದರು, ಪ್ರಜ್ಞಾನಂದರಲ್ಲಿ ಯೋಗಿಯ ಅಂತರ್‌ದೃಷ್ಟಿ ಇದೆ ಎಂದು. ಈ ಮನೆಯಲ್ಲಿರುವಾಗ ಸ್ವಾಮಿ ಪ್ರಜ್ಞಾನಂದರು, ಭಗವಂತನನ್ನು ಅವಲಂಬಿಸಿ ಹೇಗೆ ಬದುಕಬೇಕು ಮುಂತಾದ ಹಲವಾರು ಆಧ್ಯಾತ್ಮಿಕ ವಿಚಾರಗಳನ್ನು ಕುರಿತು ನನ್ನೊಡನೆ ಮಾತನಾಡುತ್ತಿದ್ದರು. ನಾನು ಮೌನವಾಗಿ ಆಲಿಸುತ್ತಿದ್ದೆ.

ನನಗಾಗ ಚೆನ್ನಾಗಿ ಕೆಲಸ ಮಾಡುವ ಶಕ್ತಿಯಿತ್ತು. ಒಳ್ಳೆಯ ಆರೋಗ್ಯವೂ ಇತ್ತು. ಯಾರ ಮನೆಯಲ್ಲಿದ್ದರೂ, ನಾನೇ ಮುಂದಾಗಿ ಹೋಗಿ ಎಲ್ಲಾ ಕೆಲಸಗಳಲ್ಲಿಯೂ ಸಹಾಯ ಮಾಡುತ್ತಿದ್ದೆ. ಮನೆಯ ಜನರೂ ನನ್ನನ್ನು ಪ್ರೀತಿಯಿಂದ ಕಾಣುತ್ತಿದ್ದರು. ನಾನು ಸಂಪ್ರದಾಯಸ್ಥ ಬ್ರಾಹ್ಮಣರ ಮನೆಯ ಹುಡುಗಿ. ಅದೇ ವಾತಾವರಣದಲ್ಲಿ ಬೆಳೆದು ದೊಡ್ಡವಳಾಗಿದ್ದೆ. ಸುಧೀರಾ ಅಕ್ಕನ ಮನೆಮಂದಿಯೆಲ್ಲಾ ಬ್ರಾಹ್ಮಸಮಾಜದವರು. ನಡೆನುಡಿ ಎಲ್ಲಾ ಪಾಶ್ಚಾತ್ಯರಂತೆ. ಇವರೆಲ್ಲರ ಜೊತೆ ಬೆರೆಯುವಾಗ ನನ್ನಲ್ಲಿ ಯಾವುದೇ ಸಂದಿಗ್ಧತೆ ಅಥವಾ ಸಂಕೋಚವಿರಲಿಲ್ಲ. ಸುಧೀರಾ ಅಕ್ಕ ಹೇಳಿದಂತೆಯೇ ನಡೆದುಕೊಳ್ಳುತ್ತಿದ್ದೆ. ಸುಧೀರಾ ಅಕ್ಕ ಯಾವಾಗಲೂ ನನಗೆ ಎಚ್ಚರಿಕೆ ಹೇಳುತ್ತಿದ್ದರು, "ನೋಡು, ನಾನು ಜೈಲಿಗೆ ಹೋಗುವಂತೆ ಮಾಡಬೇಡ." ನಾನೂ ತುಂಬ ಎಚ್ಚರಿಕೆಯಿಂದ ಇರುತ್ತಿದ್ದೆ. ಮನೆಗೆ ಹೊರಗಿನಿಂದ ಯಾರಾದರೂ ಬಂದರೆ, ನನ್ನನ್ನು ಒಂದು ಕೋಣೆಯಲ್ಲಿ ಕೂಡಿಹಾಕುತ್ತಿದ್ದರು. ಈ ಮನೆಯಲ್ಲಿರುವಾಗಲೇ ಸುಧೀರಾ ಅಕ್ಕ ನನ್ನನ್ನು ಶ್ರೀಮಾತೆಯವರ ಬಳಿ ಕರೆದುಕೊಂಡು ಹೋಗಿ ದೀಕ್ಷೆ ಕೊಡಿಸಿದರು. ಅಂದು ೧೯೧೧ರ ಬುದ್ಧಪೂರ್ಣಿಮೆಯ ದಿನ. ನಾನು ಕುದುರೆಗಾಡಿಯಲ್ಲಿ ಅಲ್ಲಿಗೆ ಹೋದೆ. ದೀಕ್ಷೆಯ ನಂತರ ಅಲ್ಲಿಯೇ ಊಟ ಮಾಡಿ ಸಂಜೆ ಮನೆಗೆ ಹಿಂತಿರುಗಿದೆವು. ಸುಧೀರಾ ಅಕ್ಕ ಆಗಾಗ ರಾತ್ರಿ ಹೊತ್ತು ನನ್ನನ್ನು ಶ್ರೀಮಾತೆಯ ಬಳಿ ಕರೆದುಕೊಂಡು ಹೋಗುತ್ತಿದ್ದರು.

(ಮುಂದುವರಿಯುವುದು)

# ಕೃಪಾಸಾಗರ ಶ್ರೀರಾಮಕೃಷ್ಣ

ಗಿರೀಶ್‌ಚಂದ್ರ ಘೋಷ್

(ಶ್ರೀರಾಮಕೃಷ್ಣರ ವ್ಯಕ್ತಿತ್ವವು ಅತ್ಯಂತ ಆಕರ್ಷಣೀಯವಾದುದು. ದಿವ್ಯಭಾವದಲ್ಲಿ ಇರುತ್ತಿದ್ದ ಅವರು ತೋರುತ್ತಿದ್ದ ಮಾನವೀಯ ಅನುಕಂಪ ಕೂಡ ಅಸದೃಶವಾದುದು. ಇದರ ಉತ್ತಮ ನಿದರ್ಶನವನ್ನು ಗಿರೀಶ್‌ಚಂದ್ರ ಘೋಷರ ನೆನಪುಗಳಲ್ಲಿ ಕಾಣಬಹುದು. ಶ್ರೀರಾಮಕೃಷ್ಣರ ೧೭೫ನೇ ಜಯಂತಿ ಮಹೋತ್ಸವದ ಸಂದರ್ಭದಲ್ಲಿ ಇದನ್ನು ಪ್ರಕಟಿಸುತ್ತಿದ್ದೇವೆ. *ಅನುವಾದ:* ಡಾ. ಇ. ವಸಂತಕುಮಾರ್)



**[ಸ್ವಾಮಿ ಶಾರದಾನಂದರು ಗಿರೀಶ್‌ಚಂದ್ರ ಘೋಷರನ್ನು ಭೇಟಿ ಮಾಡಿದಾಗ ಶ್ರೀರಾಮಕೃಷ್ಣರ ಬಗ್ಗೆ ಬರೆಯುವಂತೆ ಆಗಾಗ್ಗೆ ಅವರನ್ನು ಒತ್ತಾಯಿಸುತ್ತಿದ್ದರು. ಅವರ ಗುರುಭಾಯಿಗಳೂ, "ಗಿರೀಶ್ ಬಾಬು, ನೀವೇಕೆ ಗುರುಮಹಾರಾಜರ ಬಗ್ಗೆ ಬರೆಯಬಾರದು? ನಿಮ್ಮ ನೆನಪುಗಳು ಅಮೂಲ್ಯವಾದವು ಮತ್ತು ಅವನ್ನು 'ಉದ್ಬೋಧನ' ದಲ್ಲಿ (ರಾಮಕೃಷ್ಣ ಮಹಾಸಂಘದ ಬಂಗಾಳಿ ಪತ್ರಿಕೆ) ಪ್ರಕಟಿಸಬಹುದು. ನೀವು ಗುರುಮಹಾರಾಜರ ಬಗ್ಗೆ ಏನನ್ನು ಬರೆದರೂ ಅದು ಪ್ರಪಂಚಕ್ಕೆ ಸ್ಫೂರ್ತಿಯನ್ನು ನೀಡುವುದು" ಎಂದು ಮತ್ತೆ ಮತ್ತೆ ಹೇಳುತ್ತಿದ್ದರು. ಗಿರೀಶ್ ಬಾಬು ಯಾವಾಗಲೂ ಅವರ ಒತ್ತಾಯದ ಮಾತುಗಳನ್ನು ಗೌರವಪೂರ್ವಕವಾಗಿ ಕೇಳಿಸಿಕೊಂಡು, "ಶ್ರೀರಾಮಕೃಷ್ಣರ ಇಚ್ಛೆ ಇದ್ದಲ್ಲಿ ಅದು ಆಗುವುದು. ಅವರನ್ನು ಬಿಟ್ಟರೆ, ನಾನು ಏನೂ ಅಲ್ಲ" ಎಂದು ಉತ್ತರ ಕೊಡುತ್ತಿದ್ದರು. ಕಾಲಕ್ರಮದಲ್ಲಿ ಅವರು ಶ್ರೀರಾಮಕೃಷ್ಣರ ಬಗ್ಗೆ ಅನೇಕ ಲೇಖನಗಳನ್ನು ಬರೆದರು. ಅವೆಲ್ಲವೂ ಮೊದಲ ಬಾರಿಗೆ "ಶ್ರೀರಾಮಕೃಷ್ಣದೇವರಿಗೆ ತಮ್ಮ ಶಿಷ್ಯರ ಮೇಲೆ ಇದ್ದ ವಾತ್ಸಲ್ಯ" ಎಂಬ ಶೀರ್ಷಿಕೆಯಲ್ಲಿ 'ಉದ್ಬೋಧನ'ದಲ್ಲಿ ಪ್ರಕಟವಾದುವು. ಅವರು ಈ ಲೇಖನಗಳನ್ನು ಕಾವ್ಯಮಯವಾದ ಸರಳ ಬಂಗಾಳಿ ಭಾಷೆಯಲ್ಲಿ ಬರೆದಿದ್ದಾರೆ. ನಾನು ಅವನ್ನೆಲ್ಲಾ ಕ್ರೋಡೀಕರಿಸಿ 'ಶ್ರೀರಾಮಕೃಷ್ಣರ ನೆನಪುಗಳು' ಎಂಬ ಶೀರ್ಷಿಕೆ ಕೊಟ್ಟು ಅನುವಾದಿಸಿದ್ದೇನೆ.**

–**ಸ್ವಾಮಿ ಅಶೇಷಾನಂದ** (ಇಂಗ್ಲಿಷ್ ಅನುವಾದಕ್ಕೆ ಬರೆದ ಮುನ್ನುಡಿಯಿಂದ)]

ಶ್ರೀರಾಮಕೃಷ್ಣರ ಬಗ್ಗೆ ಒಂದು ಲೇಖನವನ್ನು ಬರೆಯಬೇಕಾಗಿ ಬಂದಾಗ, ಅದು ಬಹಳ ಸುಲಭದ ಕೆಲಸವೆಂದು ಭಾವಿಸಿದೆ. ಆದರೆ ಅದು ಈಗ ಕಡುಕಷ್ಟವೆನಿಸಿದೆ. ಶ್ರೀರಾಮಕೃಷ್ಣರ ಬಗ್ಗೆ ಬರೆಯುವುದು ಸುಲಭವೆನಿಸಿದುದಕ್ಕೆ ಕಾರಣ, ನಾನು ಅವರ ಅಪಾರಪ್ರೇಮವನ್ನು ಅನುಭವಿಸಿರುವೆನು. ನಾನು ಶ್ರೀರಾಮಕೃಷ್ಣರ ಪ್ರತಿಯೊಬ್ಬ ಶಿಷ್ಯರನ್ನೂ ಕೇಳಿರುವೆ, ಶ್ರೀರಾಮಕೃಷ್ಣರು ತಮ್ಮ ಅನಂತ ಪ್ರೇಮವನ್ನು ಅವರ ಮೇಲೆ ಹೇಗೆ ವರ್ಷಿಸಿದರು ಎಂಬುದನ್ನು. ಅನೇಕ ವೇಳೆ ಆ ಅದ್ಭುತ ಪ್ರೇಮವನ್ನು ನಮ್ಮ ನಮ್ಮಲ್ಲೇ ಮೈಮರೆತು ಚರ್ಚಿಸಿದ್ದೇವೆ. ಶಿಷ್ಯರೊಬ್ಬರು ತಮ್ಮ ವೈಯಕ್ತಿಕ ಅನುಭವವನ್ನು ಹೇಳಿದಾಗಲೆಲ್ಲ, ನನ್ನ ಹೃದಯದಲ್ಲಿ ಸಹಾನುಭೂತಿಯ ತಂತಿ ಮಿಡಿಯುವುದು ಮತ್ತು ಅವರ ಅನುಭವ ನನ್ನ ಕಣ್ಣಿಗೂ ಕಟ್ಟಿದಂತಾಗುವುದು.

ನಾನು ಆಲಿಸಿದ ಶಿಷ್ಯರ ಒಂದೊಂದು ಮಾತೂ, ಅವರು ವಿವರಿಸಿದ ಒಂದೊಂದು ಘಟನೆಯೂ, ಅಂತಹ ವಿಶ್ವಾಸಪೂರ್ವಕ ಮಾತುಗಳನ್ನು ಗುರುದೇವರಿಂದ ನಾನೂ ಕೇಳಿದ್ದೆ ಮತ್ತು ನಾನೂ ಅಂತಹ ಕರುಣಾಪೂರ್ಣ ವರ್ತನೆಯನ್ನು ಕಂಡಿದ್ದೆ ಎಂದು ಭಾವಿಸುವಂತೆ ಮಾಡುತ್ತಿದ್ದುವು. ಅದಕ್ಕಾಗಿ, ಕೇವಲ ಒಂದು ಪದ ಸಾಕಾಗುತ್ತಿತ್ತು. ಅದು, ಮತ್ತೊಮ್ಮೆ ಆ ಶಿಷ್ಯನನ್ನು ಸಂಬಂಧಿಸಿದ ಇನ್ನೊಂದು ಘಟನೆಗೆ ಕರೆದೊಯ್ಯುತ್ತಿತ್ತು ಹಾಗೂ ಕೇಳುಗರು ಅದರಲ್ಲಿ ಸಹಭಾಗಿಗಳಾಗುತ್ತಿದ್ದರು. ಆದರೆ ನನ್ನ ಅನುಭವಗಳನ್ನು ನಮ್ಮ ಓದುಗರು ಅಷ್ಟೇ ಸ್ಪಷ್ಟವಾಗಿ ಅನುಭವಿಸುತ್ತಾರೆಯೇ ಎಂದು ಸೋಜಿಗಪಡುವೆನು. ನಾನು ಅವನ್ನು ಮಾತುಗಳಲ್ಲಿ ತಿಳಿಸಬಲ್ಲೆನೆ? ಒಂದು ಪ್ರಶ್ನೆ ಕೇಳಲು ಅನುಮತಿ ಕೊಡಿ. ನೀವು ನಿಮ್ಮ ಸ್ವಂತ ತಾಯಿಯಿಂದ ಪಡೆದ ಒಲವಿನ ಸವಿಯನ್ನು ವಿವರಿಸಬಲ್ಲಿರಾ? ನನ್ನ ಮಟ್ಟಿಗಂತಲೂ ಅದು ಸಾಧ್ಯವಾಗಲಿಲ್ಲ. "ಆಹಾ, ತಾಯಿಯ ಪ್ರೇಮ, ತಾಯಿಯ ಪ್ರೇಮ" ಎಂದು ಉದ್ಗರಿಸಲು ಮಾತ್ರ ನನಗೆ ಸಾಧ್ಯವಾಯಿತು, ಅಷ್ಟೆ. ನನ್ನ ತಾಯಿಯ ಒಂದೊಂದು ನಡೆ, ನುಡಿ ಮತ್ತು ನೋಟದಲ್ಲಿ ನನಗೆ ಆದ ಆ ಅನುಭವ ವಿವರಣೆಗೆ ಮೀರಿದ್ದು. ಅಲ್ಲದೆ, ಯಾರೇ ಆದರೂ, ತಾವೇ ಸ್ವತಃ ತಾಯಂದಿರಾದ ಹೊರತು, ಮತ್ತೊಬ್ಬ ತಾಯಿಯ ಪ್ರೀತಿಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವೆ? ಅದು ಸಾಧ್ಯವಾದರೂ ಆಗಬಹುದು. ಆದರೆ, ಶ್ರೀರಾಮಕೃಷ್ಣರ ಪ್ರೀತಿಯನ್ನು ಅರ್ಥಮಾಡಿಕೊಳ್ಳುವುದು ತಾಯಿಯ ಪ್ರೇಮವನ್ನೂ ಎಷ್ಟೋಮಟ್ಟಿಗೆ ಮೀರಿಹೋಗಿದೆ. ತಾಯಿಯ ಪ್ರೀತಿ ಮಾಯೆಯ ಚೌಕಟ್ಟಿನಲ್ಲಿ ಇದೆ ಎಂದು ಹೇಳಬಹುದು. ಸಾಮಾನ್ಯವಾಗಿ ಮಾಯೆಯಿಂದ ಪ್ರೇರಿತವಾದ ಆಕೆಯ ಆಸೆಗಳು ತನ್ನ ಮಗನ ಲೌಕಿಕ ಉನ್ನತಿಯನ್ನು ಮಾತ್ರ ಬಯಸುವುವು, ಅಷ್ಟೆ. ಅನೇಕ ವೇಳೆ ಮಗ, ಆಧ್ಯಾತ್ಮಿಕ ಜ್ಞಾನೋದಯಕ್ಕೋಸ್ಕರ